Mr. SPEAKER : I will verify it. I will let you know in the House how many questions have been tabled, how many have been answered during the session and also how many have been withheld for want of answers.

ಡಬ್ಲ್ಯೂ.ಟಿ.ಓ. ಹಾಗೂ ಗ್ಯಾಟ್ ಒಪ್ಪಂದಗಳಿಂದಾಗಿ ರೈತರ ಮೇಲೆ ಪ್ರತಿಕೂಲ ಪರಿಣಾಮ

51(576) ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉದಾರೀಕರಣ ಹಾಗೂ ಜಾಗತೀಕರಣದ ಅನ್ವಯ ಡಬ್ಲ್ಯೂ.ಟಿ.ಓ.(W.T.O.)ಹಾಗೂ ಗ್ಯಾಟ್ (GATT)ಒಡಂಬಡಿಕೆ ರೈತ ಸಮುದಾಯದ ಮೇಲೆ ಆರ್ಥಿಕವಾಗಿ ಪ್ರತಿಕೂಲ ಪರಿಣಾಮಬೀರಿದ್ದು ಸಮಸ್ಯೆ ಯಾಗಿರುವುದನ್ನು ಸರ್ಕಾರವು ಮನಗಂಡಿದೆಯೇ?

ಆ) ಹಾಗಿದ್ದಲ್ಲಿ, ಈ ಪ್ರತಿಕೂಲ ಉಂಟಾಗಿರುವ ಸಂಕಷ್ಟ ಪರಿಸ್ಥಿತಿಯಿಂದ ರೈತರನ್ನು ಸಂರಕ್ಷಿಸಲು ಸರ್ಕಾರವು ತನ್ನ ವ್ಯಾಪ್ತಿಯಲ್ಲಿ ಯಾವುದಾದರೂ ಮಾರ್ಗೋಪಾಯಗಳನ್ನು ರೂಪಿಸಿದೆಯೇ?

ಇ) ರೈತರಿಗೆ ಕನಿಷ್ಟ ಬೆಂಬಲ ಬೆಲೆ ನೀಡಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ?

ಶ್ರೀ ಟಿ. ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಮನಗಂಡಿದೆ

ಆ) ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಆಮದು ಶುಲ್ಕವನ್ನು ವಿಧಿಸಲು ಒತ್ತಡ ತರಲಾಗುತ್ತಿದೆ.

ಇ) ಹೌದು

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಈ ಒಂದು ಡಬ್ಲ್ಯೂ.ಟಿ.ಓ. ಒಡಂಬಡಿಕೆಯಿಂದ ರೈತ ಸಮುದಾಯದ ಮೇಲೆ ಆಗಿರತಕ್ಕಂಥ ಪ್ರತಿಕೂಲ ಪರಿಣಾವನ್ನು ಸರ್ಕಾರ ಅಭ್ಯಾಸ ಮಾಡಿದ್ದರೆ, ಅವರ ವಿವರಗಳನ್ನು ನೀಡಬೇಕೆಂದು ಕೇಳುತ್ತಾ, ಆ ಪ್ರತಿಕೂಲ ಪರಿಣಾಮದ ಹಿನ್ನೆಲೆಯಲ್ಲಿ ಈ ಡಬ್ಲ್ಯೂ.ಟಿ.ಓ. ಅಗ್ರಿಮೆಂಟ್‌ನ್ನು , ರೈತರಿಗೆ ಮಾರಕವಾಗಿರತಕ್ಕ ಅಂಶಗಳನ್ನು ಪುನರ್-ಪರಿಶೀಲನೆ ಮಾಡತಕ್ಕ ಪ್ರಯತ್ನವನ್ನು ಏನಾದರೂ ಸರ್ಕಾರ ಮಾಡುತ್ತದೆಯೇ? ಅದು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವುದೇ ಆಗಲೀ ಅಥವಾ ಪುನರ್-ಪರಿಶೀಲನೆ ಮಾಡತಕ್ಕ ಹಿನ್ನೆಲೆಯಲ್ಲಿ ಯಾವ ಪ್ರಯತ್ನವನ್ನು ಮಾಡಿದೆ ಎಂಬುದನ್ನು ನಾನು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ಈ ಒಪ್ಪಂದದಿಂದ ರೈತರ ಕೃಷಿ ಉತ್ಪನ್ನಗಳ ರಪ್ತು ಏನಾದರೂ ಹೆಚ್ಚಾಗಿದೆಯೇ ಎನ್ನುವ ವಿಚಾರವನ್ನೂ ಕೂಡ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಗ್ಯಾಟ್‌ನ ಪರಿಣಾಮದಿಂದಾಗಿ, ಅದು ಆರ್ಥಿಕವಾಗಿ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುದನ್ನು ಸರ್ಕಾರ ಅರ್ಥಮಾಡಿಕೊಂಡಿದೆ. ಈಗಾಗಲೇ ನಾನು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರಕ್ಕೆ ನಮ್ಮ ಆಮದು

ಶುಲ್ಕವನ್ನು ಜಾಸ್ತಿ ಮಾಡಬೇಕೆಂಬ ಮನವಿಯನ್ನು ಪದೇ ಪದೇ ಮಾಡತಕ್ಕ ಕೆಲಸವನ್ನು ನಾವು ಮಾಡಿದ್ದೇವೆ. ಬಹುಶಃ ಈಗ ಈ ಡಬ್ಲ್ಯು. ಟಿ.ಓ. ಎನ್ನತಕ್ಕಂತಾದ್ದು, ಅದು ಸರಿ ಅಥವಾ ತಪ್ಪು ಎನ್ನುವುದಕ್ಕಿಂಥ ಹೆಚ್ಚಾಗಿ, ನಮ್ಮಲ್ಲಿ ಡಬ್ಲ್ಯು.ಟಿ.ಓ. ನಲ್ಲಿರತಕ್ಕಂಥ ವಿಷಯಗಳಲ್ಲಿ ಬಹಳ ಮುಖ್ಯವಾಗಿರತಕ್ಕಂತಾದ್ದು ಮೂರು ಅಂಶಗಳು; ಒಂದು ಮಾರ್ಕೆಟ್ ಆಕ್ಸೆಸಬಿಲಿಟಿ, ಒಂದು ಡೊಮ್ಯಾಸ್ಟಿಕ್ ಸಪೋರ್ಟ್, ಇನ್ನೊಂದು ಎಕ್ಸ್‌ಪೋರ್ಟ್ ಸಬ್ಸಿಡಿ, ಇದರಲ್ಲಿ ನಮ್ಮ ದೇಶಕ್ಕೆ ಅನ್ವಯವಾಗತಕ್ಕ ರೀತಿಯಲ್ಲಿ ಡೊಮ್ಯಾಸ್ಟಿಕ್ ಸಪೋರ್ಟ್ ಕೊಡುವುದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿಲ್ಲ. ಏಕೆಂದರೆ, ನಮ್ಮ ಅಗ್ರಿಮೆಂಟ್ ಪ್ರಕಾರ ಬೆಲೆಗಳು ಮೈನಸ್ ಸೈಡ್ ಇರುವುದರಿಂದ, ಸಬ್ಸಿಡಿ ಎಷ್ಟು ಬೇಕಾದರೂ ಕೊಡುವುದಕ್ಕೆ ಅವಕಾಶ ಇದೆ. ಇನ್‌ಕಮ್ ಟ್ಯಾಕ್ಸ್ ಎಕ್ಸ್‌ಂಪ್‌ಷನ್ ಬಿಟ್ಟರೆ, ನಾವು ಎಕ್ಸ್‌ಪೋರ್ಟ್ ಸಬ್ಸಿಡಿಯನ್ನು ಇಲ್ಲಿಯವರೆಗೂ ಕೂಡ ಕೊಟ್ಟುಕೊಂಡು ಬಂದಿಲ್ಲ. ಅಂದರೆ ಇರತಕ್ಕಂತಾದ್ದು ಮಾರ್ಕೆಟ್ ಆಕ್ಸಸ್. ಮಾರ್ಕೆಟ್ ಆಕ್ಸಸ್‌ನಲ್ಲಿ ಮುಖ್ಯವಾದ ಅಂಶವೆಂದರೆ, ಒಂದು ಟ್ಯಾರಿಫಿಕೇಷನ್ and non-tariff barriers ಎಂದು ಎರಡೇ ಇರತಕ್ಕಂತಾದ್ದು. ಅದರಲ್ಲಿ ನಾವು ಎಷ್ಟು ಎಂದು ಹೇಳಿದರೆ, ಪ್ರೋಸೆಸ್ಡ್‌ಫುಡ್ಸ್ ಇರಬಹುದು, ನಮ್ಮ ಗೈನ್ಸ್ ಇರಬಹುದು, ಇವುಗಳ ಮೇಲೆ ನೂರು ಪರ್ಸೆಂಟ್‌ವರೆಗೂ ಟ್ಯಾಕ್ಸ್ ಹಾಕುವುದಕ್ಕೆ ಅವಕಾಶ ಇದೆ. ಪ್ರೋಸೆಸ್ಡ್‌ಫುಡ್ ಆದರೆ, 150ರವರೆಗೂ, ಆಯಿಲ್ ಆದರೆ, 300 ಪರ್ಸೆಂಟ್‌ವರೆಗೂ ಹಾಕುವುದಕ್ಕೆ ಅವಕಾಶವಿದೆ. ಮ್ಯಾಕ್ಸಿಮಮ್ ಲಿಮಿಟ್‌ವರೆಗೂ ಟ್ಯಾಕ್ಸ್ ಹಾಕುವುದಕ್ಕೆ ನಾವು ಒತ್ತಾಯವನ್ನು ಮಾಡಿದ್ದೇವೆ. ನಿನ್ನೆ ಬಜೆಟ್‌ನಲ್ಲಿ ಸ್ವಲ್ಪ ಜಾಸ್ತಿ ಮಾಡತಕ್ಕಂಥ ಕೆಲಸ ಆಗಿದೆ. ಆದರೂ ಅದರ ಮೇಲೆ ಪರಿಣಾಮ ಏನಾಗುತ್ತದೆ ಎಂಬುದನ್ನು ನಾವು ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ. ಬಹುಶ: ನಮ್ಮ ಒತ್ತಾಯ ಇರತಕ್ಕಂತಾದ್ದು ನೂರಕ್ಕೆ ನೂರು ಜಾಸ್ತಿ ಮಾಡಬೇಕು. ನೂರೈವತ್ತಕ್ಕೆ ನೂರೈವತ್ತರಷ್ಟು ಹೋಗಬೇಕು. ಆಯಿಲ್ ಇಂಪೋರ್ಟ್‌ಗೂ ಕೂಡ ಇನ್ನೂರು ಪರ್ಸೆಂಟ್‌ವರೆಗೂ ಜಾಸ್ತಿ ಹೋಗಬೇಕೆಂಬುದು ನಮ್ಮ ಒತ್ತಾಯ. ಆದರೆ, ಜಾಸ್ತಿಯಾಗಿರುವುದು ಕೆಲವು ಪರ್ಸೆಂಟ್ ಮಾತ್ರ. ಕೇವಲ 35 ರಿಂದ 70 ಪರ್ಸೆಂಟ್‌ವರೆಗೂ ಜಾಸ್ತಿಯಾಗಿರತಕ್ಕ ಸಂದರ್ಭದಲ್ಲಿ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ನೋಡಬೇಕು. ಆದರೆ ರಾಜ್ಯಸರ್ಕಾರದ ಮಟ್ಟದಲ್ಲಿ ಟ್ಯಾಕ್ಸನ್ನು, ಕಸ್ಟಮ್ಸ್ ಡ್ಯೂಟಿಯನ್ನು ಜಾಸ್ತಿ ಮಾಡಬೇಕೆಂಬ ಒತ್ತಾಯವನ್ನು ನಿರಂತರವಾಗಿ ನಾವು ಕೇಂದ್ರ ಸರ್ಕಾರದ ಮೇಲೆ ಮಾಡಿಕೊಂಡೇ ಬಂದಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ:, ಇವತ್ತು ಸದನದಲ್ಲಿ ಬಹಳ ಮಹತ್ವದ ಪ್ರಶ್ನೆಯನ್ನು ಸನ್ಮಾನ್ಯ ಶಾಸಕರು ರೈಸ್ ಮಾಡಿದ್ದಾರೆ. ನಿನ್ನೆ ಸಹಿತ ಈ ಒಂದು ವಿಷಯದ ಬಗ್ಗೆ ಚರ್ಚೆಯಾಯಿತು. ರೈತರ ಬೆಳೆಗಳು ಕುಸಿತವಾದ ಸಂದರ್ಭದಲ್ಲಿ ಆ ಬಗ್ಗೆ ಸಾಕಷ್ಟು ಚರ್ಚೆಯಾದಾಗ ಈ ಡಬ್ಲ್ಯು.ಟಿ.ಓ. ಅಗ್ರಿಮೆಂಟ್ ಮತ್ತು ಇದರ ಪರಿಣಾಮಗಳ ಬಗ್ಗೆ ಚಿಂತನೆ ಆಗಬೇಕೆಂದು ನಿನ್ನೆ ಸಾಕಷ್ಟು ಚರ್ಚೆಯಾಗಿದೆ. ನಾನು ಹಿಂದೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಮತ್ತು ನಿನ್ನೆ ಸಹಿತ ನಾನು ಅವರಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಈ ಡಬ್ಲ್ಯು.ಟಿ.ಓ. ಅಗ್ರಿಮೆಂಟ್, ಗ್ಯಾಟ್ ಒಪ್ಪಂದ, ಇದರ ಪರಿಣಾಮಗಳು. ಕೃಷಿ ರಂಗದ ಮೇಲೆ ಆಗತಕ್ಕ ಪರಿಣಾಮಗಳು ಆಗಿರುವಂಥ ಪರಿಣಾಮಗಳು ಮತ್ತು ಇವುಗಳನ್ನು ಅವಾಯ್ಡ್ ಮಾಡುವುದಕ್ಕೆ ಏನು ಪ್ರಯತ್ನಗಳನ್ನು ಮಾಡಬೇಕು, ಅದು ಕೇಂದ್ರ ಸರ್ಕಾರ ಇರಲಿ ಅಥವಾ ರಾಜ್ಯ ಸರ್ಕಾರ ಇರಲಿ; ಎರಡೂ ಸರ್ಕಾರಗಳಿಂದ ಕೃಷಿ ರಂಗಕ್ಕೆ ಅನುಕೂಲ ಮಾಡುವಂಥ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಯಾವ ಕ್ರಮಗಳನ್ನು

ಕೈಗೊಳ್ಳಬೇಕೆಂಬ ಬಗ್ಗೆ ಚಿಂತನೆ ಆಗಬೇಕು. ಇದರ ಬಗ್ಗೆ ವಿವರವಾದ ಚರ್ಚೆಯಾಗಬೇಕು ಎಂಬುದು ಎಲ್ಲರ ಅಭಿಪ್ರಾಯವಾಗಿರುತ್ತದೆ. ಇದರ ಬಗ್ಗೆ ನಾನು ಹಿಂದೆ ಇನ್‌ಸಿಸ್ಟ್ ಮಾಡಿದ್ದೆ. ಒಂದು ವಾರಕಾಲ, ಕೇವಲ ಈ ಕೃಷಿರಂಗದ ಮೇಲೆಯೇ, ಈ ಡಬ್ಲ್ಯು.ಟಿ.ಓ. ಅಗ್ರಿಮೆಂಟ್‌ನ ಪರಿಣಾಮಗಳ ಬಗ್ಗೆಯೇ ಚರ್ಚೆಮಾಡುವ ಸಲುವಾಗಿ ಒಂದು ಅಧಿವೇಶನ ಕರೆಯಿರಿ ಎಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೆ. ಬಹುಶಃ ಅವರೂ ಅದಕ್ಕೆ ಸ್ಪಂದನ ಕೊಟ್ಟಿದ್ದರು. ಅದರ ಬಗ್ಗೆ ಚರ್ಚೆಮಾಡೋಣ ಎಂದು ಹೇಳಿದ್ದರು. ಬರೀ ಅದರ ಸಲುವಾಗಿಯೇ ಅಧಿವೇಶನ ಕರೆಯಬೇಕು, ಅಲ್ಲಿ ಬೇರೆ ಯಾವುದೇ ವಿಷಯಗಳು ಚರ್ಚೆಯಾಗಬಾರದು, ಈ ರೀತಿ ಚರ್ಚೆಯಾದರೆ ಮಾತ್ರ ಅದಕ್ಕೆ ಏನಾದರೂ ಪರಿಹಾರ ಹುಡುಕುವುದಕ್ಕೆ ಸಾಧ್ಯವಿದೆ. ನಿನ್ನೆ ಮಾನ್ಯ ಯಶವಂತ ಸಿನ್ಹರವರು ಲೋಕಸಭೆಯಲ್ಲಿ ಏನು ಬಜೆಟ್ ಮಂಡನೆ ಮಾಡಿದರು ಆ ಸಂದರ್ಭದಲ್ಲಿ ಇದರ ಪರಿಣಾಮಗಳ ದೂರದೃಷ್ಟಿಯನ್ನಿಟ್ಟುಕೊಂಡು, ಹಲವಾರು ಉತ್ಪನ್ನಗಳ ಮೇಲೆ, ಕ್ರಾಪ್ ಮೇಲೆ ಇವತ್ತು ಏನು ಇಂಪೋರ್ಟ್ ಬರುತ್ತಿವೆ, ಅದರ ಮೇಲೆ ಇಂಪೋರ್ಟ್ ಡ್ಯೂಟಿಯನ್ನು ಜಾಸ್ತಿ ಮಾಡಿರುವುದನ್ನು ನೋಡುತ್ತಿದ್ದೇವೆ. ಅದರ ಪರಿಣಾಮ ಎಷ್ಟು? 75 ಪರ್ಸೆಂಟ್, 80 ಪರ್ಸೆಂಟ್, 40 ಪರ್ಸೆಂಟ್ ಹೀಗೆ ಕೆಲಕೆಲವುಗಳ ಬಗ್ಗೆ ಜಾಸ್ತಿ ಮಾಡಿದ್ದಾರೆ; ಮ್ಯಾಕ್ಸಿಮಮ್ 100 ಪರ್ಸೆಂಟ್, 300 ಪರ್ಸೆಂಟ್‌ವರೆಗೂ ಮಾಡಲಿಕ್ಕೆ ಅವಕಾಶವಿದೆ ಎಂಬ ಚಿಂತನೆಯೂ ಇದೆ. ಅದಕ್ಕಾಗಿ, ನಾವು ಅದರ ಬಗ್ಗೆ ಹೆಚ್ಚು ಚಿಂತನೆ ಮಾಡಿದರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು : ತಮ್ಮ ಅಭಿಪ್ರಾಯ, ಇದನ್ನೇ ಪ್ರತ್ಯೇಕವಾಗಿ ಚರ್ಚೆ ಮಾಡಬೇಕು ಎಂಬುದು.

10.40 ಎ.ಎಂ.

ಶ್ರೀ ಜಗದೀಶ್ ಶೆಟ್ಟರ್ : ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತು ರಾಜ್ಯದ ಪ್ಲಾನಿಂಗ್ ಕಮೀಷನ್ ಉಪಾಧ್ಯಕ್ಷರಾದ ಶ್ರೀ ಜೈರಾಮ್ ರಮೇಶ್‌ರವರು ಇದ್ದಾರೆ. ಈ ಡಬ್ಲ್ಯು.ಟಿ.ಓ. ಬಗ್ಗೆ ಮೊನ್ನೆ ಧಾರವಾಡದಲ್ಲಿ ಒಂದು ಸೆಮಿನಾರ್ ನಡೆಯಿತು. ಅಲ್ಲಿ ಶ್ರೀ ಜಯರಾಮ್ ರಮೇಶ್‌ರವರು ಹೇಳಿದ್ದು, "W.T.O. is not responsible for fall in prices" ಎಂದು ಅದರ ಬಗ್ಗೆ ಚಿಂತನೆ ನಡೆದಿದೆ. ಇದರಿಂದ ಏನಾಗಿದೆ ಅಂದರೆ, ರೈತರಲ್ಲಿ ಒಂದು ಗೊಂದಲ ಸೃಷ್ಟಿ ಮಾಡುವಂತಾದ್ದು ನಡೆಯುತ್ತಿದೆ. ಕೃಷಿಕರಲ್ಲಿ ಒಂದು ಗೊಂದಲ ಸೃಷ್ಟಿ ಮಾಡುವಂತಾದ್ದು ನಡೆಯುತ್ತಿದೆ. ರೈತರಲ್ಲಿ ಭಯಭೀತಿಯುಂಟು ಮಾಡುವಂತಾದ್ದು ನಡೆಯುತ್ತಿದೆ. ಕೃಷಿಕರಲ್ಲಿ ಒಂದು ಗೊಂದಲ ಸೃಷ್ಟಿ ಮಾಡುವಂತಾದ್ದು. ಇದರ ಬಗ್ಗೆ ಬೆಳಕು ಚೆಲ್ಲುವಂತಾದ್ದು ಆಗಬೇಕು. ಈ ಡಬ್ಲ್ಯು.ಟಿ.ಓ.ದಲ್ಲಿ ಅಡ್ವಾನ್‌ಟೇಜ್ ಏನು ಇದೆ? ಈ W.T.O.ದಲ್ಲಿ ಡಿಸ್-ಅಡ್ವಾನ್‌ಟೇಜ್ ಏನು ಇದೆ. ಈ ಡಿಸ್-ಅಡ್ವಾನ್‌ಟೇಜ್‌ನ್ನು ಅಡ್ವಾನ್‌ಟೇಜ್ ಆಗಿ ಮಾಡಬೇಕಾದರೆ ನಾವು ಏನು ಮಾಡಬೇಕು? ಎನ್ನುವ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಎಲ್ಲಾ ಎಕ್ಸ್‌ಪರ್ಟ್ಸ್ ಕಡೆಯಿಂದ ಈ ಬಗ್ಗೆ ಒಂದು ಚಿಂತನೆ ಆಗಲಿ ಮತ್ತು ನಾವೆಲ್ಲರೂ ಕೂಡಿಕೊಂಡು ಕೇಂದ್ರ ಸರ್ಕಾರದ ಕಡೆ ಸಹ ಹೋಗೋಣ; ಇದರಿಂದ ಏನಾದರೂ ದುಷ್ಪರಿಣಾಮಗಳು ಆಗುವಂತಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಕೂಡಿಕೊಂಡು ನಾವೆಲ್ಲ ಸೇರಿ ಕೇಂದ್ರ ಸರ್ಕಾರಕ್ಕೆ ಹೇಳೋಣ.

ಶ್ರೀ ಎಸ್. ಎಂ. ಕೃಷ್ಣ : (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ನಾನು ಈ ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದುಂಟು. ಅಗತ್ಯ ಬಿದ್ದರೆ ಒಂದು ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ನಾನು ಸೂಚನೆಯನ್ನು ಸಹ ಮಾಡಿದ್ದೆ. ನಮ್ಮ ದೇಶದಲ್ಲಿ ಇನ್ನು ಯಾವ ರಾಜ್ಯವೂ ಕೂಡ ಈ ಬಗ್ಗೆ ಯೋಚನೆ ಮಾಡದೇ ಇದ್ದಂತಹ ಕಾಲದಲ್ಲಿ ಕರ್ನಾಟಕ ರಾಜ್ಯದಲ್ಲಿ ನಾವು, ನೀವು ಸೇರಿ ಈ ಡಬ್ಲ್ಯು. ಟಿ. ಓ. ಬಗ್ಗೆ ಒಂದು ವಿಶೇಷ ಸೆಲ್‌ನ್ನು ಸ್ಥಾಪನೆ ಮಾಡಿದೆವು. ಇಂಟರ್‌ನ್ಯಾಷನಲ್ ಪುಡ್ ಆರ್ಗನೈಜೇಶನ್ ಏನಿದೆ ಅದರ ಉನ್ನತ ಅಧಿಕಾರಿ ಒಬ್ಬರು ನಿವೃತ್ತಿಯಾಗಿ ಈಗ ಬೆಂಗಳೂರಿನಲ್ಲಿದ್ದಾರೆ. ಅವರ ಬುದ್ಧಿಶಕ್ತಿಯ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಅವರಲ್ಲಿ ಈ ಸೆಲ್‌ನ ಅಧ್ಯಕ್ಷರಾಗಬೇಕೆಂದು ನಾವು ಕೇಳಿಕೊಂಡಾಗ ಅವರು ಬಹಳ ಔದಾರ್ಯದಿಂದ ಅದನ್ನು ಒಪ್ಪಿದರು. ಅವರು 7 ತಿಂಗಳಲ್ಲಿ ಒಂದು ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿಯನ್ನು ಅವರು ಸುಮಾರು ಮೂರು ವಾರಗಳ ಹಿಂದೆಯಷ್ಟೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ಡಬ್ಲ್ಯು. ಟಿ. ಓ. ಬಗ್ಗೆ ಆಳವಾದ ಚರ್ಚೆ ನಡೆಯಬೇಕಾಗಿದ್ದರೆ ಅದರ ಬಗ್ಗೆ ಆಳವಾದ ಅಧ್ಯಯನ ಮೊದಲು ನಡೆಯಬೇಕು; ಅಂದರೆ ಆ ಸೆಲ್‌ನ ಅಧ್ಯಕ್ಷರು ಈ ದಿವಸ ಆ ಪುರಾವೆಗಳನ್ನು ಸರ್ಕಾರಕ್ಕೆ ಒದಗಿಸಿದ್ದಾರತ. ಅನೇಕ ಮಾಹಿತಿಗಳನ್ನು ಸರ್ಕಾರಕ್ಕೆ ಒದಗಿಸಿದ್ದಾರೆ. ಆ ಮಧ್ಯಂತರ ವರದಿಯ ಪ್ರತಿಯನ್ನು ನಾವು ಬರುವ ಸೋಮವಾರದ ಹೊತ್ತಿಗೆ ಎಲ್ಲಾ ಗೌರವಾನ್ವಿತ ಮಾನ್ಯ ಸದಸ್ಯರುಗಳಿಗೆ ಒದಗಿಸಿ ಕೊಡುತ್ತೇವೆ. ಆ ವರದಿಯನ್ನು ತಾವು ಅಧ್ಯಯನ ಮಾಡಿ, ಆ ನಂತರ 2-3 ದಿವಸ ಇದಕೋಸ್ಕರವೇ ನಿಗಧಿ ಮಾಡಿ ಚರ್ಚೆ ಮಾಡೋಣ. ಆ ಚರ್ಚೆಯನ್ನು ಯಾವ ವಿಧವಾದಂತಹ ಪೂರ್ವಾಗ್ರಹ ಪೀಡಿತರಾಗದೇ ಡಾಕ್ಟರ್ ಜಯರಾಮ್ ರಮೇಶ್‌ರವರು ಏನು ಹೇಳಿದ್ದಾರೆ, ಅದನ್ನು ಒಳಗೊಂಡಂತೆ ಏಕೆಂದರೆ ಡಾಕ್ಟರ್ ಜಯರಾಮ್ ರಮೇಶ್‌ರವರು ಹೇಳಿದ್ದನ್ನು ಒಪ್ಪುವುದಾದರೆ ಈ ಚರ್ಚೆಯೇ ಬೇಕಾಗಿಲ್ಲ. ಡಬ್ಲ್ಯು. ಟಿ. ಓ. ದಿಂದ ಏನೂ ಆಗಿಲ್ಲ ಅಂತ ಹೇಳಿದರೆ ನಾವು ಚರ್ಚೆ ಏತಕ್ಕೆ ಮಾಡಬೇಕು? ಆದ್ದರಿಂದ ಡಾಕ್ಟರ್ ಜಯರಾಮ್ ರಮೇಶ್‌ರವರ ಪರ್‌ಸ್‌ಪ್‌ಷನ್ ಏನು ಇದೆ ಅದು ಎಷ್ಟೇ ಗಮನಾರ್ಹವಾದ ಪರ್‌ಸೆಪ್‌ಷನ್ ಆಗಿದ್ದರೂ ಕೂಡ ಅದೂ ಕೂಡ ಚರ್ಚಾಸ್ಪದವಾದಂತಹ ವಿಚಾರವೇ. ಅದು ಸರಿಯೇ, ತಪ್ಪೋ? ಎಲ್ಲೋ ಒಂದು ಕಡೆ ಒಂದು ಭಾವನೆ ಬಂದುಬಿಟ್ಟಿದೆ. ಅಂದರೆ ನಮ್ಮ ರೈತರ ಎಲ್ಲಾ ಸಂಕಷ್ಟಗಳಿಗೂ ಕೂಡ ಈ ಡಬ್ಲ್ಯು. ಟಿ. ಓ ಒಂದು ಕಾರಣ ಆಗಿದೆ ಅಂತ. ಇದೊಂದು ಪೆಡಂಭೂತವಾಗಿ ನಮ್ಮ ರಾಜಕಾರಣಿಗಳು ಮತ್ತು ಇತರರ ಮುಂದೆ ಇದು ಎದ್ದು ಕಾಣುತ್ತಿದೆ. ಇದರ ಸತ್ಯಾಸತ್ಯತೆಗಳು ಏನೇ ಇರಲಿ, ಹಿಂದಿನ ಸರ್ಕಾರಗಳು ಏನು ನಿಲುವನ್ನು ತೆಗೆದುಕೊಂಡಿದ್ದರು, ಮೂರು ನಾಲ್ಕು ನಮೂನೆ ಸರ್ಕಾರಗಳು ಬಂದು ಹೋಗಿವೆ. ಒಂದು ಸ್ವಂತ ಶಕ್ತಿಯಿಂದ ನಡೆಸಿದಂತಹ ಸರ್ಕಾರ. ನಮ ಕೃಷ್ಣಾಪೋಷಿತದಿಂದ ಎರಡು ಸರ್ಕಾರಗಳು ಬಂದವು; ಆ ನಂತರ 13 ದಿವಸದ ಸರ್ಕಾರ ಬಂತು. ಆ ನಂತರ ಒಂದು ವರ್ಷದ ಸರ್ಕಾರ ಬಂತು. ಆದ್ದರಿಂದ ಈ ಎಲ್ಲಾ ಸರ್ಕಾರಗಳ ತಪ್ಪು ಒಪ್ಪುಗಳನ್ನು ಒಟ್ಟಿಗೆ ಬೇರೆ ಕಡೆಗೆ ಇಟ್ಟು ನಾವು ಮುಂದೆ ಈ ದೇಶದ ವ್ಯವಸಾಯ ಕ್ಷೇತ್ರದಲ್ಲಿ, ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಇತರೇ ಕ್ಷೇತ್ರದಲ್ಲಿ ಇವತ್ತು ಒಂದು ಭಾಗದಲ್ಲಿ ಏನಾಗುತ್ತದೆ ಅಂದರೆ ನಮ್ಮ ಔಷಧಗಳ ಬೆಲೆಗಳು ಬಹಳ ಹೆಚ್ಚು ಆಗಬಹುದು ಎನ್ನತಕ್ಕಂಥಾ ಒಂದು ಭಯ ಇದೆ. ಆದ್ದರಿಂದ ಇವುಗಳೆಲ್ಲವನ್ನು ನಿರ್ವಿಕಾರವಾದ ಭಾವನೆಯಿಂದ, ಮುಕ್ತವಾದ ಮನಸ್ಸಿನಿಂದ ಚರ್ಚೆ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಚರ್ಚೆಗೆ ಬೇಕಾಗುವಂತಹ ಮಾಹಿತಿಯನ್ನು ಒದಗಿಸುವುದಕ್ಕೆ ನನಗೆ ತಾವು ಎರಡು ದಿವಸ ಅವಕಾಶ

ಕೊಡಬೇಕು. ಆ ವರದಿ ಈಗ ಪ್ರಿಂಟ್ ಆಗುತ್ತಿದೆ. ಅದು ಪ್ರಿಂಟ್ ಆದ ತಕ್ಷಣ ಅದರ ಪ್ರತಿಯನ್ನು ನಾವು ತಮಗೆಲ್ಲಾ ಕೊಡುತ್ತೇವೆ. ಈ ದೇಶದ ಎಲ್ಲಾ ಸಂಸದೀಯ ಸದಸ್ಯರಿಗೆ ಇಂಗ್ಲೀಷ್‌ನಲ್ಲಿ ಈ ಪ್ರತಿಯನ್ನು ಮುದ್ರಿಸಿ ಕಳುಸಿಕೊಟ್ಟಿದ್ದೇವೆ. ಅದರ ಉದ್ದೇಶವೇನೆಂದರೆ, ಈ ದೇಶದಲ್ಲಿ ಇದರ ಬಗ್ಗೆ ಸಾರ್ವಜನಿಕ ಚರ್ಚೆಯಾಗಿ ಇನ್ನು ಮುಂದೆ ಅದು ಮುಂದಿನ ಪೀಳಿಗೆಯ ಭಾರತೀಯರ ಹಿತದೃಷ್ಟಿಯಿಂದ ಬಹು ಅಗತ್ಯವಾಗಿದೆ ಎನ್ನುವುದನ್ನು ಸಾದರಪಡಿಸುವುದಕ್ಕೆ ದೃಢೀಕರಣ ಮಾಡುವುದಕ್ಕೋಸ್ಕರ ಇದನ್ನು ಮಾಡುತ್ತೇವೆ. ಚರ್ಚೆಗೆ ಸರ್ಕಾರ ಸಿದ್ದವಾಗಿದೆ.

ಅಧ್ಯಕ್ಷರು : ಸರ್ಕಾರ ಚರ್ಚೆ ಮಾಡಲು ಒಪ್ಪಿರುವುದರಿಂದ ತಾವು ಆಗ ಮಾತನಾಡಿ.

ಶ್ರೀ ಕೆ.ಶ್ರೀನಿವಾಸ ಗೌಡ : ಎರಡು ನಿಮಿಷ; ಮಾನ್ಯ ಅಧ್ಯಕ್ಷರೇ, ಎಪ್ರಿಲ್ ಒಂದನೇ ತಾರೀಖಿನಿಂದ ಈ ಡಬ್ಲ್ಯು.ಟಿ.ಓ. ಒಪ್ಪಂದ ಇಂಪ್ಲಿಮೆಂಟ್ ಆಗುತ್ತದೆ. ಇನ್ನು ಕೇವಲ 28 ದಿವಸಗಳು ಮಾತ್ರ ಇದೆ. ಈ 28 ದಿವಸಗಳಲ್ಲಿ ನಾವು ಆ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬರಬೇಕಾದರೆ ಕಷ್ಟವಾಗುತ್ತದೆ. ಈ ಮಧ್ಯದಲ್ಲಿ ಈ ಸದನ 14ನೇ ತಾರೀಖಿನವರೆಗೆ ಮಾತ್ರ ನಡೆಯುತ್ತದೆ. ಅದರ ಮಧ್ಯದಲ್ಲಿ ರಜೆಗಳು ಬರುತ್ತವೆ. ನಾವು ಏನು ನಿರ್ಣಯ ಕೈಗೊಳ್ಳುತ್ತೇವೆ ಅದು ಕೇಂದ್ರ ಸರ್ಕಾರಕ್ಕೆ ತಲುಪುವುದಿಲ್ಲ. ಆದ್ದರಿಂದ, ನಾವೆಲ್ಲ ಸೇರಿ ಈ ಬಗ್ಗೆ ಒಂದೇ ಒಂದು ನಿರ್ಣಯವನ್ನು ಮಾಡೋಣ. ಅದೇನೆಂದರೆ, ಸಿ.ಟಿ.ಬಿ.ಟಿ.ಗೆ ಬೇರೆ ದೇಶಗಳ ಒತ್ತಡ ಇದ್ದರೂ ಸಹ ಅದನ್ನು ನಾವು ಒಪ್ಪುತ್ತಿಲ್ಲ. ಅದೇ ರೀತಿಯಲ್ಲಿ ಈ ಡಬ್ಲ್ಯು.ಟಿ.ಓ.ವನ್ನು ಒಪ್ಪಬಾರದು ಅಂತ ಒಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸೋಣ. ಸಿ.ಟಿ.ಬಿ.ಟಿ.ಯಲ್ಲಿ ಯಾವ ಪರಿಣಾಮ ಇದೆಯೇ ಅದೇ ರೀತಿಯ ಪರಿಣಾಮ ಈ ಡಬ್ಲ್ಯು.ಟಿ.ಓ.ದಿಂದ ರೈತರಿಗೆ ಇದೆ. ಈ ಡಬ್ಲ್ಯು.ಟಿ.ಓ. ಬರುತ್ತದೆಂದು ರೈತ ಬೆಳೆದಂತಹ ಪದಾರ್ಥಗಳನ್ನು ಯಾವ ಖಾಸಗೀಯವರು ಸಹ ಕೊಂಡುಕೊಳ್ಳುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಚರ್ಚೆ ಮಾಡಲು ಒಪ್ಪಿದ್ದಾರೆ. ಅವರು ಎರಡು ದಿವಸ ಸಮಯ ಕೇಳಿದ್ದಾರೆ. ತಮಗೆಲ್ಲಾ ಮಾಹಿತಿ ಕೊಡಬೇಡವೇ? ಎರಡು ದಿವಸದಲ್ಲಿ ಏನೂ ಆಗುವುದಿಲ್ಲ. ಈ ಪ್ರಶ್ನೆಯನ್ನು ಇಲ್ಲಿಗೇ ಮೊಟಕು ಮಾಡೋಣ

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾದ ವಿಷಯ. ಈ ದೇಶದ ರೈತರ ಕಣ್ಣಲ್ಲಿ ಇವತ್ತು ರಕ್ತ ಬರುತ್ತಿದೆ. ಅಂತಹ ಪರಿಸ್ಥಿತಿಯಲ್ಲಿ ಬೇರೆ ಎಲ್ಲವನ್ನೂ ಬದಿಗೊತ್ತಿ ಈ ವಿಷಯವನ್ನು ಚರ್ಚೆ ಮಾಡಬೇಕಾಗಿದೆ.

MR. SPEAKER : I don't think it is necessary to continue further about this question since the Government has agreed to discuss it in threadbare for more than 3 days and also they have to supply some literature to all the members. How can you talk without literature? Come on, tell me.

ಶ್ರೀ ಸಿ.ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರ ಬಗ್ಗೆ ನಮ್ಮ ಸ್ವಾಗತ ಇದೆ. ನಾವು ಪ್ರಶ್ನೆ ಕೇಳಿರತಕ್ಕಂಥಾದ್ದು ರೈತರ ಸಂಕಷ್ಟದಲ್ಲಿ ಬೆಂಬಲ ಕೊಡುವಂತಹ ಪರಿಸ್ಥಿತಿಯಲ್ಲಿ ಸರ್ಕಾರದ ವತಿಯಿಂದ ಏನು ವ್ಯವಸ್ಥೆ ಮಾಡಿದ್ದೀರಿ? ಏನು ಹಣ ಖರ್ಚು ಮಾಡಿದ್ದೀರಿ, ಆ ಬಗ್ಗೆ ಮಾಹಿತಿ ಕೊಡಿ.

ಅಧ್ಯಕ್ಷರು : ಈ ವಿಷಯ ಚರ್ಚೆಗೆ ಬಂದಾಗ ಉತ್ತರ ಕೊಡುತ್ತಾರೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ, ಕನಿಷ್ಟ ಬೆಂಬಲ ಕೊಟ್ಟಿದೆ ಎನ್ನುವುದನ್ನು ಉತ್ತರದಲ್ಲಿ ತಿಳಿಸಿದ್ದಾರೆ. ಕನಿಷ್ಟ ಬೆಂಬಲ ಬೆಲೆ ಕೊಡುವುದರಲ್ಲಿ ಯಾವ ರೀತಿಯ ಕ್ರಮ ಕೈಗೊಂಡಿದ್ದಾರೆ?

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ ಆಗಿರುವಂತಹ ಕೆಟ್ಟ ಪರಿಣಾಮವನ್ನು ನಿವಾರಣೆ ಮಾಡುವುದಕ್ಕೆ ಕೇಂದ್ರ ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ಗರಿಷ್ಠ ಆಮದು ಶುಲ್ಕವನ್ನು ವಿಧಿಸಿದೆ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಇವೊತ್ತು ಕೂಡ ಹೇಳಿದ್ದಾರೆ. 'Maximum tariff', the word used is the maximum'. ಯಾವ ಯಾವ ಸರಕಿನ ಮೇಲೆ ಈ ವರ್ಷದ ಆಯವ್ಯಯದಲ್ಲಿ ಆಮದು ಶುಲ್ಕವನ್ನು ಹೆಚ್ಚು ಮಾಡಿದ್ದಾರೆ ಎಂಬುದನ್ನು ಈ ಸಭೆಗೆ ತಿಳಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಸನ್ಮಾನ್ಯ ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಆತ್ಮಾನಂದರವರು ಕೇಳಿದ ಪ್ರಶ್ನೆಗೆ ಉತ್ತರ ಹೇಳಬೇಕಾದರೆ, ನಾವು ಈಗಾಗಲೇ ಬೆಂಬಲ ಬೆಲೆಯನ್ನು ನಿಗದಿ ಮಾಡುವುದಕ್ಕೋಸ್ಕರವಾಗಿ ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರದವರು ನಾವು ಎಲ್ಲಾ ಬೆಳೆಗಳಿಗೂ ಸಂಬಂಧಪಟ್ಟಹಾಗೆ ಶಿಫಾರಸ್ಸನ್ನು ಮಾಡಿದ್ದೇವೆ. ಇತ್ತೀಚೆಗೆ ಮೊನ್ನೆ ಡೆಲ್ಲಿಯಲ್ಲಿ ಒಂದು ಉನ್ನತ ಮಟ್ಟದ ಸಭೆ ಕೂಡ ನಡೆದು ರಾಜ್ಯದ ಪರವಾಗಿ ನಮ್ಮ ಅಧಿಕಾರಿಗಳು ಆಬಗ್ಗೆ ಪ್ರತಿಪಾದನೆಯನ್ನು ಮಾಡಿದ್ದಾರೆ. ನಾವು ಕನಿಷ್ಟ ಬೆಂಬಲ ಬೆಲೆ ನೀತಿಯ ಅಡಿಯಲ್ಲಿ ಸಾಂಪ್ರದಾಯಿಕವಾಗಿ ಕೊಡತಕ್ಕಂಥ ಹತ್ತು, ಐದು ರೂಪಾಯಿಗಳೆಂದು ನಿಗದಿ ಆಗುವುದಾದರೆ ಅದುಸರಿ ಆಗುವುದಿಲ್ಲ, ನಮ್ಮ ಕಾಸ್ಟ್ ಆಫ್ ಕಲ್ಟಿವೇಶನ್ ಏನಿದೆ ಎಂಬುದನ್ನು ಮನವರಿಕೆ ಮಾಡಿ, ನೀವು ತೀರ್ಮಾನ ಮಾಡುವ ಮುಂಚೆ ರಾಜ್ಯಕ್ಕೆ ಬಂದು ನಮ್ಮ ಯುನಿವರ್ಸಿಟಿಗಳವರ ಹತ್ತಿರ ಕುಳಿತು ಚರ್ಚೆ ಮಾಡಿ ನಿರ್ಧಾರ ಮಾಡಬೇಕೆಂಬ ಒತ್ತಾಯವನ್ನು ನಾವು ಇಟ್ಟಮೇಲೆ ಅವರು ಅದಕ್ಕೆ ಒಪ್ಪಿದ್ದಾರೆ. ಬಹುಶ: ಪ್ರಪ್ರಥಮವಾಗಿ, ನಾವು ರಾಜ್ಯದಲ್ಲಿ ಬಂದು ನೋಡಿ, ಪರಿಶೀಲನೆ ಮಾಡಿ ಆಮೇಲೆ ಬೆಲೆ ನಿಗದಿ ಮಾಡುತ್ತೇವೆಂದು ಅವರ ಹೇಳಿದ್ದಾರೆ. ಇದೊಂದು ಮೊದಲ ನಿದರ್ಶನವಾಗಿದೆ. ಅವರು ಇಲ್ಲಿಗೆ ಬಂದಮೇಲೆ ನಾವು ರಾಜ್ಯ ಸರಕಾರದ ಪರವಾಗಿ ಅನೇಕ ವಿಚಾರಗಳನ್ನು ಅವರಮುಂದೆ ಮಂಡನೆ ಮಾಡುವುದಕ್ಕೆ ಅವಕಾಶವಿರುತ್ತದೆ. ಆ ಮೂಲಕ ಹೆಚ್ಚು ಬೆಂಬಲ ಬೆಲೆಯನ್ನು ಕೊಡತಕ್ಕಂಥ ಒಂದು ಪ್ರಯತ್ನವನ್ನು ನಾವು ಮಾಡುತ್ತೇವೆ.

ಇನ್ನು ಸನ್ಮಾನ್ಯ ವೈ.ಕೆ. ರಾಮಯ್ಯನವರು ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಮೊನ್ನೆ ನಡೆದಂಥ ಆಯವ್ಯಯದಲ್ಲಿ ಹಾಕಿರತಕ್ಕಂಥ ರಿವೈಸ್ಡ್ ಕಸ್ಟಂಮ್ಸ್ ಡ್ಯೂಟಿ ಎಷ್ಟು ಅಂದರೆ, ಆ ಬಗ್ಗೆ ಮ್ಯಾಗ್ನಿಮಮ್ ಎಂದು ಮಾಡಿದಂತೆ ಕಾಣುತ್ತಾ ಇಲ್ಲ. ನಮಗೆ ಗೊತ್ತಿರತಕ್ಕಂತಹ ವಿಚಾರದ ಪ್ರಕಾರ 35 ರಿಂದ 70 ಪರ್‌ಸೆಂಟ್‌ವರೆಗೆ ಆಗಿದೆ. ಬಹುಶಃ ನಮಗೆ ಡೆಯಿಸ್ ಮೇಲೆ ಒಂದರಲ್ಲಿ 30 ರಿಂದ 50 ಪರ್‌ಸೆಂಟ್ ಆಗಿದೆ. ಡೆಯಿಸ್ ಕೂಡ ಇಂಪೋರ್ಟ್ ಆಗುತ್ತಾ ಇದೆ ರೈಸ್ ಮೇಲೆ ಕೂಡ 35 ರಿಂದ 80 ಪರ್‌ಸೆಂಟ್ ಆಗಿದೆ. ಕ್ರೂಡ್ ಈಡಿಬಲ್ ಆಯಿಲ್ಸ್ ಮೇಲೆ 55 ರಿಂದ 75 ಪರ್‌ಸೆಂಟ್‌ವರೆಗೆ ಆಗಿದೆ. ಅದು ಮ್ಯಾಗ್ನಿಮಮ್ ಆದಂತೆ ಏನೂ ಆಗಿಲ್ಲ. ಮಾನ್ಯ ಸದಸ್ಯರ ಮಾಹಿತಿಗೋಸ್ಕರ

ಹೇಳುವುದಾದರೆ, ಈ ಇಂಪೋರ್ಟ್ ಡ್ಯೂಟಿಯನ್ನು ಜಾಸ್ತಿ ಮಾಡಿರುವುದರಿಂದ ಪರಿಣಾಮ ಆಗುತ್ತದೋ ಲಾಭ ಆಗುತ್ತದೋ ಎಂಬ ವಿಚಾರವು ನಮ್ಮೆಲ್ಲರ ಮನಸ್ಸಿನಲ್ಲಿರಬಹುದು. ನಾವು ಒಂದು ಅಂಕಿಅಂಶಗಳ ಪ್ರಕಾರ ಮಾಡಿರತಕ್ಕಂತೆ ನಮಗೆ ಇಂಪೋರ್ಟ್ ಆಗತಕ್ಕಂಥ ಪಾಮ್ ಆಯಿಲ್ ಏನಿದೆ. ಅದು 230 ಡಾಲರ್‌ಗೆ ನಮಗೆ ಇಂಪೋರ್ಟ್ ಆಗುತ್ತಿದೆ. 230 ಡಾಲರ್‌ಗೆ ನಾವು 85 ಪರ್‌ಸೆಂಟ್ ಟ್ಯಾಕ್ಸ್‌ನ್ನು ಹಾಕಿದಾಗಲೂ ಕೂಡ ನಮಗೆ ಸಿಗುವ 15 ಪರ್‌ಸೆಂಟ್ ಲಾಭವನ್ನು ಕೂಡ ಇಟ್ಟು ಅನ್‌ಸ್ಪಾಟ್ ಎಷ್ಟಕ್ಕೆ ಬರುತ್ತದೆ ಅಂದರೆ 24 ರಿಂದ 25 ಸಾವಿರ ರೂಪಾಯಿಗಳವರೆಗೆ ಒಂದು ಟನ್ ಆಯಿಲ್‌ನ್ನು ನಾವು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅಂದರೆ ಒಂದು ಕೆ.ಜಿ. ಪಾಮ್ ಆಯಿಲ್‌ನ್ನು 24 ರೂಪಾಯಿಗಳಿಗೆ ನಮ್ಮದೇಶದಲ್ಲಿ ಮಾರಾಟ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದೇ ನಮ್ಮ ಶೇಂಗಾ ಎಣ್ಣೆಯ ಮ್ಯಾನುಫ್ಯಾಕ್ಚರಿಂಗ್ ಕಾಸ್ಟ್ 28 ರಿಂದ 32 ರೂಪಾಯಿಗಳವರೆಗೆ ಆಗುತ್ತದೆ. ಹಾಗಾಗಿ ಬೆಲೆ ಅತ್ಯಧಿಕ ಆರಿರಬೇಕೆಂಬ ಭಾವನೆ ನಮ್ಮಲ್ಲಿ ಇಲ್ಲ. ಅದನ್ನು ಇನ್ನೂ ಕೂಡ ಜಾಸ್ತಿ ಮಾಡಬೇಕೆನ್ನುವುದು ನಮ್ಮಲ್ಲಿದೆ. ಆ ಬಗ್ಗೆ ಯತ್ನಗಳು ನಡೆದಿವೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಕೂಡ ಆಶ್ವಾಸನೆಯನ್ನು ಕೊಟ್ಟ ಪ್ರಕಾರ ನಾವೆಲ್ಲರೂ ಸೇರಿ ಚರ್ಚೆ ಮಾಡುವ ಸಂದರ್ಭದಲ್ಲಿ ಕೇಂದ್ರ ಸರಕಾರಕ್ಕೆ ಮತ್ತೆ ಮನವಿಯನ್ನು ಮಾಡಿಕೊಳ್ಳುತ್ತೇವೆ.

ಮನ್ಯ ಶ್ರೀನಿವಾಸಗೌಡರವರು ಹೇಳಿದ ವಿಚಾರಕ್ಕೆ ನಾನು ತಿಳಿಯಪಡಿಸುವುದೇನೆಂದರೆ, ಈಗಾಗಲೇ quantity restrictuons, 713 ಪ್ರಾಡಕ್ಟ್ಸ್‌ಗಳ ಮೇಲೆ ಏಪ್ರಿಲ್ ಒಂದರಿಂದ ಬರತಕ್ಕಂಥಾದ್ದಕ್ಕೆ ನೋಟಿಫಿಕೇಶನ್ ಕೂಡ ಈಗಾಗಲೇ ಬಂದಿದೆ. ಅದನ್ನು ಜಾರಿಗೆ ಕೊಡುವುದಷ್ಟೆ ಬಾಕಿ ಇದೆ. ಅದನ್ನು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ಕೇಂದ್ರ ಸರಕಾರಕ್ಕೆ ಮನವಿಯನ್ನು ಮಾಡುತ್ತೇವೆ. ಇದು ನೆಗೋಶಿಯೇಶನ್ ಟೇಬಲ್ ಆಷ್ಟೆ. ಅದು ಏಪ್ರಿಲ್ ತಿಂಗಳಲ್ಲಿ ಅಥವಾ ಮೇ ತಿಂಗಳಲ್ಲಿ ಆಗಬಹುದು. ಆ ನೆಗೋಶಿಯೇಶನ್ ಮಾಡುವಂಥ ಸಂದರ್ಭದಲ್ಲಿ ಕೇಂದ್ರ ಸರಕರದವರು ಡಬ್ಲ್ಯು.ಟಿ.ಓ. ಜೊತೆಯಲ್ಲಿ ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿದರೆ ಇವೆಲ್ಲದಕ್ಕೂ ಕಡಿವಾಣ ಹಾಕುವುದಕ್ಕೆ ಸಾಧ್ಯವಾಗುತ್ತದೆ. ಈ ಕುರಿತು ನಾವು ಸಮಯೋಚಿತವಾಗಿ ಸಂಬಂಧಪಟ್ಟವರೊಂದಿಗೆ ಚರ್ಚೆ ಮಾಡುತ್ತೇವೆ.

ತೋಟಗಾರಿಕೆ ಇಲಾಖೆಯಿಂದ ನೀಡುವ ಸೌಲಭ್ಯಗಳು

52 (639) ಶ್ರೀ ಕೃಷ್ಣಪ್ಪ .ವಿ. (ದೊಡ್ಡಬಳ್ಳಾಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯಲ್ಲಿ ಉಚಿತವಾಗಿ ಹಾಗೂ ರಿಯಾಯಿತಿ ದರದಲ್ಲಿ ವಿತರಿಸುವ ಪರಿಕರಗಳು ಯಾವುವು? ಈ ಸಾಲಿನಲ್ಲಿಯೂ ಉಚಿತವಾಗಿ ಹಾಗೂ ರಿಯಾಯಿತಿ ದರದಲ್ಲಿ ವಿತರಣೆಯನ್ನು ಮುಂದುವರೆಸಲಾಗಿದೆಯೇ?

ಆ) ಪ್ರಸ್ತುತ ವರ್ಷದಲ್ಲಿ ಯಾವ ಯಾವ ಯೋಜನೆಗಳಡಿಯಲ್ಲಿ ಸವಲತ್ತುಗಳನ್ನು ನೀಡಲಾಗಿದೆ? ಆದರಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಎಷ್ಟು ಒದಗಿಸಲಾಗಿದೆ? ವಿವರ ನೀಡುವುದು.

ಇ) ರಾಜ್ಯದಲ್ಲಿ ತೆಂಗಿನ ಮರಕ್ಕೆ ಬಂದಿದ್ದ ನುಸಿ ರೋಗವನ್ನು ಪೂರ್ಣ ತಡೆಗಟ್ಟಲಾಗಿದೆಯೇ ಇದಕ್ಕಾಗಿ ಸರ್ಕಾರ ವೆಚ್ಚ ಮಾಡಿದ ಒಟ್ಟು ಮೊಬಲಗು ಎಷ್ಟು? ವಿವರ ನೀಡುವುದು.